157ನೇ B = ನಿ=72=
(88)
4pm

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರ ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ

### ಸೂಚನೆ

ರಾಜ್ಯದ ಅಲೆಮಾರಿ ಗುಂಪಿಗೆ ಸೇರಿದ ಹಿಂದುಳಿದ ವರ್ಗದ ಪ್ರವರ್ಗ-1ರ ಹೆಳವ ಜನಾಂಗದವರು ಸರಿ ಸುಮಾರು ಮೂವತ್ತು ಸಾವಿರ ಜನಸಂಖ್ಯೆಯಷ್ಟಿದ್ದು, ಹೊಟ್ಟೆಪಾಡಿಗಾಗಿ ಒಕ್ಕಲು ಮನೆತನದವರ ವಂಶಾವಳಿ ಹೇಳುತ್ತಾ, ಮಳೆ, ಗಾಳಿ, ಬಿಸಿಲು, ಚಳಿ ಎನ್ನದೆ ಊರೂರು ಅಲೆಯುತ್ತಾ, ಶಾಶ್ವತ ನೆಲೆಯಿಲ್ಲದೆ ಕಸಪೊರಕೆ ಹಾಗೂ ಚಾಪೆಗಳನ್ನು ಎಣೆದು ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದು, ಅತ್ಯಂತ ಸಣ್ಣ ಸಮುದಾಯದವರಾದ ಇವರು ಶೈಕ್ಷಣಿಕವಾಗಿ, ಸಾಮಾಜಿಕ, ಆರ್ಥಿಕವಾಗಿ ತೀರಾ ಹಿಂದುಳಿದವರಾಗಿರುವುದರಿಂದ ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕೆನ್ನುವ ಕುರಿತು ನಿಯಮ 72 ರ ಅಡಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

### ಉತ್ತರ

ಸರ್ಕಾರದ ಆದೇಶ ಸಂಖ್ಯೆ:ಸಕಇ 150 ಎಸ್ ಎಡಿ 2010 ದಿನಾಂಕ:01.10.2016 ರಲ್ಲಿ ರಾಜ್ಯದಲ್ಲಿನ ಪಿಚ್ಚಗುಂಟ್ಲು ಮತ್ತು ಹೆಳವ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಮಾನವ ಶಾಸ್ತ್ರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ವರದಿ ಸಲ್ಲಿಸಲು ಆದೇಶಿಸಲಾಗಿದೆ.

ಅದರಂತೆ, ಕುಲಸಚಿವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಹೆಳವ ಮತ್ತು ಪಿಚ್ಚಗುಂಟ್ಲು ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನವನ್ನು ಕೈಗೊಂಡು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಗೆ ಸಲ್ಲಿಸಿರುವ ಅಂತಿಮ ವರದಿಯು ಸ್ವೀಕೃತವಾಗಿದ್ದು, ಹೆಳವ ಮತ್ತು ಪಿಚ್ಚಗುಂಟ್ಲು ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರ್ಪಡೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ.

STW/SECB/SAD/151/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ